# ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನವಲಗುಂದ

## ಸಿ.ಸಿ. ನಂ.431/2018

ಫಿರ್ಯಾದಿ : ಕರ್ನಾಟಕ ಸರಕಾರ ನವಲಗುಂದ ಪಿ.ಎಸ್.

**ವಿರುಧ್ಧ**

ಆರೋಪಿತರು : 1. ಶ್ರೀ ರಾಜೇಸಾಬ ತಂದೆ ಹಸನಸಾಬ ನದಾಫ್

## ದೋಷಾರೋಪಣೆ

ನಾನು **ಸಂತೋಷ ಎಮ್. ಎಸ್.** ಬಿ,ಎ,ಎಲ್ಎಲ್,ಬಿ, (ಹಾನ್ಸ್) ಎಲ್ಎಲ್.ಎಮ್. ಪ್ರ.ದ.ನ್ಯಾದಂ.ಗಳು ನವಲಗುಂದ ಆದ ನಾನು

ಆರೋಪಿತರು : 1. ಶ್ರೀ ರಾಜೇಸಾಬ ತಂದೆ ಹಸನಸಾಬ ನದಾಫ್
ವಯಾಃ 38 ವರ್ಷ, ಉದ್ಯೋಗಃ ಕೂಲಿ ಕೆಲಸ,
ಸಾಃ ಆಯಟ್ಟಿ, ತಾಃ ನವಲಗುಂದ.

ನಿಮ್ಮಗಳ ಮೇಲೆ ಈ ಕೆಳಕಂಡ ಆರೋಪಗಳನ್ನು ಮಾಡಿರುತ್ತೇನೆ.

ದಿನಾಂಕಃ 15.03.2018 ರಂದು ಮುಂಜಾನೆ 11.00 ಗಂಟೆಗೆ ನವಲಗುಂದ ಪೋಲಿಸ್ ಠಾಣೆಯ ಹದ್ದಿಯ ಪೈಕಿ ಆಯಟ್ಟಿ ಗ್ರಾಮದ ಬಸ್ ನಿಲ್ದಾಣದ ಮುಂದಿನ ರಸ್ತೆಯ ಮೇಲೆ ಆರೋಪಿಯಾದ ನೀವು ನಿಮ್ಮ ಸ್ವಂತ ಪಾಯಿದೆಗೋಸ್ಕರ ಯಾವುದೇ ಪಾಸ್ ವ ಪರ್ಮಿಟ್ ಇಲ್ಲದೆ ಅನಧೀಕೃತವಾಗಿ ಹೈವರ್ಡ್ಸ ವಿಸ್ಕಿ ತುಂಬಿದ 90 ಎಂ.ಎಲ್ ಅಳತೆಯ ಟೆಟ್ರಾ ಪಾಕೇಟ್ ಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಾ ನಿಂತಾಗ ಅಬಕಾರಿ ದಾಳಿ ಕಾಲಕ್ಕೆ ಸಿಕ್ಕಿದ್ದು ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಎಸಗಿರುವುದಾಗಿ ಆರೋಪಿಸುತ್ತೇನೆ.

**ಪ್ರಶ್ನೆ.1:** ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

**ಉತ್ತರಃ**

**ಪ್ರಶ್ನೆ.2:** ಆಪಾದನೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೋ ?

**ಉತ್ತರಃ**

ಎರಡನೇಯದಾಗಿ, ಅದೇ ದಿನ, ಅದೇ ವೇಳೆಗೆ ಆಯಟ್ಟಿ ಗ್ರಾಮದ ಬಸ್ ನಿಲ್ದಾಣದ ಮುಂದಿನ ರಸ್ತೆಯ ಮೇಲೆ ಆರೋಪಿಯಾದ ನೀವು ನಿಮ್ಮ ಸ್ವಂತ ಪಾಯಿದೆಗೋಸ್ಕರ ಯಾವುದೇ ಪಾಸ್ ವ ಪರ್ಮಿಟ್ ಇಲ್ಲದೆ ಅನಧೀಕೃತವಾಗಿ 91 ಹೈವರ್ಡ್ಸ್ ವಿಸ್ಕಿ ತುಂಬಿದ 90 ಎಂ.ಎಲ್ ಅಳತೆಯ ಟೆಟ್ರಾ ಪಾಕೇಟ್ ಗಳನ್ನು ನಿಮ್ಮ ತಾಬಾದಲ್ಲಿಟ್ಟುಕೊಂಡು ಸಿಕ್ಕಿದ್ದು ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಎಸಗಿರುವುದಾಗಿ ಆರೋಪಿಸುತ್ತೇನೆ.

**ಪ್ರಶ್ನೆ.1:** ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

**ಉತ್ತರಃ**

**ಪ್ರಶ್ನೆ.2:** ಆಪಾದನೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೋ ?

**ಉತ್ತರಃ**

ಮೇಲ್ಕಂಡ ಅಪರಾಧಗಳನ್ನು ನನ್ನ ಕಾರ್ಯಕಕ್ಷೆಯಲ್ಲಿ ಎಸಗಿರುವುದರಿಂದ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತೇನೆ.

(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ ಉತ್ತರ ಪಡೆದು ಬಹಿರಂಗ ನ್ಯಾಯಾಲಯದಲ್ಲಿ ನಮೂದು ಮಾಡಲಾಯಿತು )

ನವಲಗುಂದ.

ದಿನಾಂಕಃ 12.10.2021

**(ಸಂತೋಷ ಎಮ್. ಎಸ್.)**

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ನವಲಗುಂದ.